ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

## ಪ್ರಕಟಣೆ

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003**

**ಸಂಖ್ಯೆ: ಬಿ9-ನೇಮಕಾತಿ-ವಿವ-1/2009-10 ದಿನಾಂಕ 26-09-2009**

ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 218 ವನಪಾಲಕ ಮತ್ತು 863 ಅರಣ್ಯ ರಕ್ಷಕ ಹುದ್ದೆಗಳಿಗೆ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2003 ರಂತೆ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ನಮೂನೆಯ ಅರ್ಜಿ, ಅಭ್ಯರ್ಥಿಗಳ ಸೂಚನಾ ಪುಸ್ತಕ ಹಾಗೂ ಅರ್ಜಿ ಸಲ್ಲಿಸಬೇಕಾದ ವಿಳಾಸವಿರುವ ಲಕೋಟೆಯನ್ನು ಅರಣ್ಯ ಇಲಾಖಾ ವತಿಯಿಂದ ಮಾರಾಟ ಮಾಡಲಾಗುವುದು. **ನಿಗದಿತ** ನಮೂನೆಯ ಅರ್ಜಿ, ಅಭ್ಯರ್ಥಿಗಳ ಸೂಚನಾ ಪುಸ್ತಕ ಹಾಗೂ ಅರ್ಜಿ ಸಲ್ಲಿಸಬೇಕಾದ ವಿಳಾಸವಿರುವ ಲಕೋಟೆಯನ್ನು ದಿನಾಂಕ **09-11-2009 ರಿಂದ 23-11-2009** (ಈ ಅವಧಿಯ ಸರ್ಕಾರಿ ರಜಾ ದಿನಗಳಲ್ಲೂ ಸಹ) **ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ** ರಾಜ್ಯದ ಎಲ್ಲಾ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಹಾಗೂ ಬೆಂಗಳೂರಿನ 18ನೇ ಅಡ್ಡ ರಸ್ತೆ, ಮಲ್ಲೇಶ್ವರಂನಲ್ಲಿರುವ ಅರಣ್ಯ ಭವನದ ಮಾರಾಟ ಕೌಂಟರ್‌ನಲ್ಲಿ ರೂ. 75/-ನ್ನು ನಗದಾಗಿ ಪಾವತಿಸಿ ಪಡೆದುಕೊಳ್ಳಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **30-11-2009** ರಂದು ಅಪರಾಹ್ನ **2.30** ಗಂಟೆವರೆಗೆ.

ವಿದ್ಯಾರ್ಹತೆ:

| | |
|---|---|
| ವನಪಾಲಕ ಹುದ್ದೆ | ಪಿ.ಯು.ಸಿ. (ವಿಜ್ಞಾನ) / 12ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಗಣಿತಶಾಸ್ತ್ರ **(Mathematics)**, ಭೌತಶಾಸ್ತ್ರ **(Physics)**, ರಸಾಯನಶಾಸ್ತ್ರ **(Chemistry)**, ಜೀವಿಶಾಸ್ತ್ರ **(Biology)** ಐಚ್ಛಿಕ ಪಠ್ಯಕ್ರಮಗಳಲ್ಲಿ ಯಾವುದಾದರೂ ಎರಡು ಅಥವಾ ಹೆಚ್ಚಿನ ಪಠ್ಯಕ್ರಮಗಳನ್ನು ಪಿ.ಯು.ಸಿ. / 12ನೇ ತರಗತಿ ಮಟ್ಟದಲ್ಲಿ ಅಭ್ಯಾಸ ಮಾಡಿರಬೇಕು. |
| ಅರಣ್ಯ ರಕ್ಷಕ ಹುದ್ದೆ | ಎಸ್.ಎಸ್.ಎಲ್.ಸಿ. / 10ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು. |

ವಯೋಮಿತಿ, ನೇಮಕಾತಿ ವಿಧಾನ, ಪರೀಕ್ಷೆಗಳು (ದೇಹದಾರ್ಢ್ಯತೆ, ದೈಹಿಕ ತಾಳ್ವಿಕೆ, ಲಿಖಿತ ಪರೀಕ್ಷೆ, ವೈದ್ಯಕೀಯ ಪರೀಕ್ಷೆ) ಮೂಲ ದಾಖಲಾತಿಗಳ ಅವಶ್ಯಕತೆ, ಹುದ್ದೆಗಳ ಮೀಸಲಾತಿ ವರ್ಗೀಕರಣ ವಿವರಗಳು, ಪಠ್ಯಕ್ರಮ, ಪರೀಕ್ಷಾ ಕೇಂದ್ರಗಳು ಇತ್ಯಾದಿ ವಿವರಗಳಿಗೆ ಈ ಕಚೇರಿಯ ದಿನಾಂಕ 26-09-2009ರ ಅಧಿಸೂಚನೆಯನ್ನು ಗಮನಿಸುವುದು. ಅಧಿಸೂಚನೆಯನ್ನು ಅರಣ್ಯ ಇಲಾಖೆಯ website **www.karnatakaforest.gov.in** ದಲ್ಲಿ ಪ್ರಕಟಿಸಲಾಗಿದೆ. ಅಲ್ಲದೆ, ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಅರಣ್ಯ ಭವನದ ಸೂಚನಾ ಫಲಕದಲ್ಲಿಯೂ, ರಾಜ್ಯದ ಎಲ್ಲಾ ವೃತ್ತಗಳ ಅರಣ್ಯ ಸಂರಕ್ಷಣಾಧಿಕಾರಿಗಳ ಹಾಗೂ ಎಲ್ಲಾ ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗಗಳ ಕಚೇರಿಗಳ ಸೂಚನಾ ಫಲಕದಲ್ಲಿಯೂ ಸಹ ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ.

ಬೆಂಗಳೂರು,
ದಿನಾಂಕ: 26-09-2009.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಆಯ್ಕೆ ಪ್ರಾಧಿಕಾರ.